# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 923 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 22.02.2024 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯಾದ್ಯಂತ ಮತ್ತು ಬೆಂಗಳೂರು ನಗರದಲ್ಲಿ ಅಬಕಾರಿ ಇಲಾಖೆಯ ಸಿಎಲ್–2 (ರಿಟೈಲ್ ಅಂಗಡಿ) ಪರವಾನಗಿ ಪಡೆದು ಸಿಎಲ್–9 (ಬಾರ್ ಮತ್ತು ರೆಸ್ಟೋರೆಂಟ್) ಪರವಾನಗಿ ಮಾನದಂಡದಲ್ಲಿ ಮದ್ಯವನ್ನು ಚಿಲ್ಲರೆ ಮಾರಾಟ ಮಾಡುತ್ತಿದ್ದು, ಅದೇ ಸ್ಥಳದಲ್ಲಿ ಗ್ರಾಹಕರಿಗೆ ಮದ್ಯ ಸೇವನೆಗೆ ಅವಕಾಶ ಮಾಡಿಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ವ್ಯವಸ್ಥೆಯನ್ನು ತಡೆಗಟ್ಟಲು ವಿಫಲವಾಗಿರುವ ಸ್ಥಳೀಯ ಅಬಕಾರಿ ಅಧಿಕಾರಿಗಳ ಮೇಲೆ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಕ್ರಮಗಳೇನು; ಇಂತಹ ಅಕ್ರಮ ದಂಧೆಯನ್ನು ತಡೆಗಟ್ಟಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲವೆ; | ಇಲಾಖೆಯಿಂದ ನೀಡಲಾಗುವ ಸಿಎಲ್–2 (ರಿಟೈಲ್ ಅಂಗಡಿ) ಸನ್ನದುಗಳಲ್ಲಿ ಮುಚ್ಚಿದ ಬಿರುಡೆಯೊಂದಿಗೆ ಮದ್ಯವನ್ನು ಮಾರಾಟ ಮಾಡುವ ಷರತ್ತನ್ನು ವಿಧಿಸಲಾಗಿದ್ದು, ಕೆಲವೊಂದು ಸನ್ನದುದಾರರು ಷರತ್ತನ್ನು ಉಲ್ಲಂಘಿಸಿ ಚಿಲ್ಲರೆಯಾಗಿ ಮದ್ಯ ಮಾರಾಟ ಮಾಡುವುದು ಹಾಗೂ ಅದೇ ಸ್ಥಳದಲ್ಲಿ ಮದ್ಯವನ್ನು ಸೇವಿಸಲು ಗ್ರಾಹಕರಿಗೆ ಅವಕಾಶ ಕಲ್ಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಇದು ಸಿಎಲ್–2 ಸನ್ನದು ಷರತ್ತು 8ರ ಉಲ್ಲಂಘನೆಯಾಗಿದ್ದು, ಷರತ್ತನ್ನು ಉಲ್ಲಂಘಿಸುವ ಸನ್ನದುದಾರರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ, 1965 ಹಾಗೂ ತತ್ಸಂಬಂಧ ನಿಯಮಗಳನ್ವಯ ಸ್ಥಳೀಯ ಕಾರ್ಯನಿರ್ವಾಹಕ ಅಬಕಾರಿ ಅಧಿಕಾರಿಗಳು ಪ್ರಕರಣಗಳನ್ನು ದಾಖಲಿಸಿ ನಿಯಂತ್ರಣಾ ಕ್ರಮಗಳನ್ನು ಕೈಗೊಂಡಿರುತ್ತಾರೆ. ಆದ್ದರಿಂದ, ಪ್ರಕರಣ ದಾಖಲಿಸುವಲ್ಲಿ ಯಾವುದೇ ವಿಫಲತೆಯು ಕಂಡುಬಂದಿರುವುದಿಲ್ಲ. ಇಂತಹ ಸನ್ನದು ಷರತ್ತು ಉಲ್ಲಂಘನೆಯ ಪ್ರಕರಣಗಳು (ಬಿ.ಎಲ್.ಸಿ) ದಂಡ ವಿಧಿಸಿ ಇತ್ಯರ್ಥಪಡಿಸಬಹುದಾದಂತಹ ಪ್ರಕರಣಗಳಾಗಿರುತ್ತವೆ. |

<table>
<tr>
<td>ಆ</td>
<td>ಈ ವ್ಯವಸ್ಥೆಯಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿದ್ದು ಹಲವಾರು ಮಹಿಳಾ ಸಂಘಟನೆಗಳು ಮತ್ತು ಸಮಾಜದ ಸ್ವಾಸ್ಥ್ಯದ ಬಗ್ಗೆ ಕಾಳಜಿಯುಳ್ಳ ಅನೇಕ ಸಂಘ ಸಂಸ್ಥೆಗಳು ಇದನ್ನು ಸರಿಪಡಿಸಲು ಹೋರಾಟವನ್ನು<br>ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಪಿಡುಗನ್ನು ತೊಲಗಿಸಲು ಸರ್ಕಾರ ಯಾವ ರೀತಿಯ ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ? (ಮಾಹಿತಿ ನೀಡುವುದು)</td>
<td>ಸಿ.ಎಲ್–2 ಸನ್ನದು ಮಳಿಗೆಗಳಲ್ಲಿ ಮದ್ಯವನ್ನು ಚಿಲ್ಲರೆಯಾಗಿ ಮಾರಾಟ ಮಾಡುವ ಹಾಗೂ ಅಲ್ಲಿಯೇ ಮದ್ಯವನ್ನು ಸೇವಿಸಲು ಅವಕಾಶ ಕಲ್ಪಿಸಿರುವ ಸನ್ನದುಗಳ ವಿರುದ್ಧ ಕ್ರಮಕೈಗೊಳ್ಳುವಂತೆ ಕೋರಿ ಸಾರ್ವಜನಿಕರಿಂದ ಹಾಗೂ ಸಂಘ ಸಂಸ್ಥೆಗಳಿಂದ ಸ್ಥಳೀಯ ಅಬಕಾರಿ ಕಛೇರಿಗಳಿಗೆ ದೂರುಗಳು ಸ್ವೀಕೃತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಕಳೆದ 03 ವರ್ಷಗಳಲ್ಲಿ ಮದ್ಯವನ್ನು ಬಿಡಿಯಾಗಿ / ಮಳಿಗೆಯ ಆವರಣದಲ್ಲಿಯೇ ಸೇವನೆ ಮಾಡಲು ಅವಕಾಶ ನೀಡಿರುವ ಸಂಬಂಧ ಒಟ್ಟು 1,285 ಪ್ರಕರಣಗಳನ್ನು ಸನ್ನದುಗಳ ವಿರುದ್ಧ ದಾಖಲಿಸಲಾಗಿರುತ್ತದೆ. ಸನ್ನದು ಷರತ್ತುಗಳನ್ನು ಪದೇ ಪದೇ ಉಲ್ಲಂಘಿಸಿದಲ್ಲಿ ಅಂತಹ ಸನ್ನದುಗಳನ್ನು ಅಮಾನತ್ತು/ರದ್ದುಪಡಿಸುವ ಕ್ರಮವನ್ನು ಕೈಗೊಳ್ಳಲು ಸೂಚನೆಯನ್ನು ನೀಡಲಾಗಿರುತ್ತದೆ. ದಾಖಲಿಸಿದ ಪ್ರಕರಣಗಳು ಹಾಗೂ ಸನ್ನದು ಷರತ್ತುಗಳ ಉಲ್ಲಂಘನೆಗಾಗಿ ಅಮಾನತ್ತುಪಡಿಸಿದ ಸನ್ನದುಗಳ ವರ್ಷವಾರು ವಿವರ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ಅಬಕಾರಿ ವರ್ಷ (ಜುಲೈ ರಿಂದ ಜೂನ್ ಮಾಹೆವರೆಗೆ)</th><th>ಮದ್ಯವನ್ನು ಬಿಡಿಯಾಗಿ / ಮಳಿಗೆಯ ಆವರಣ ದಲ್ಲಿಯೇ ಸೇವನೆ ಮಾಡಲು ಅವಕಾಶ ನೀಡಿರುವ ಸಂಬಂಧ ದಾಖಲಿಸಿದ ಪ್ರಕರಣಗಳ ಸಂಖ್ಯೆ</th><th>ಸನ್ನದು ಷರತ್ತುಗಳ ಉಲ್ಲಂಘನೆಗಾಗಿ ಅಮಾನತ್ತು ಪಡಿಸಿದ ಸನ್ನದುಗಳ ಸಂಖ್ಯೆ</th></tr>
<tr><td>1.</td><td>2021–22</td><td>525</td><td>195</td></tr>
<tr><td>2.</td><td>2022–23</td><td>526</td><td>321</td></tr>
<tr><td>3.</td><td>2023–24 (ಡಿಸೆಂಬರ್ ಅಂತ್ಯದವರೆಗೆ)</td><td>234</td><td>15</td></tr>
<tr><td colspan="2">ಒಟ್ಟು</td><td>1,285</td><td>531</td></tr>
</table>
</td>
</tr>
<tr>
<td>ಇ</td>
<td>ಕುಡಿತದಿಂದ ಅಪಘಾತಗಳು ಹೆಚ್ಚಾಗುತ್ತಿದ್ದು, ಸಾರ್ವಜನಿಕ ಆರೋಗ್ಯ ಕೆಡುತ್ತಿದ್ದು ಮತ್ತು</td>
<td>ಅಬಕಾರಿ ಇಲಾಖೆಯು ಮದ್ಯದ ಬಳಕೆಯನ್ನು ಉತ್ತೇಜಿಸುವುದಿಲ್ಲ ಹಾಗೂ ಮದ್ಯದ ಸೇವನೆಯನ್ನು ಬೆಂಬಲಿಸುವುದಿಲ್ಲ. ಮದ್ಯ ಬಳಕೆದಾರರಿಗೆ ಆರೋಗ್ಯಕರ</td>
</tr>
</table>

| | | |
|---|---|---|
| | ಅಪರಾಧಗಳು ಜಾಸ್ತಿಯಾಗುತ್ತಿದ್ದು, ಕುಡಿಯವವರ ಸಂಖ್ಯೆಯನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ವಾತವರಣದಲ್ಲಿ ಗುಣಮಟ್ಟದ ಮದ್ಯವು ಸರಬರಾಜು ಆಗುವುದನ್ನು ಖಾತರಿಪಡಿಸಿ, ಸುರಕ್ಷಿತವಲ್ಲದ ಮದ್ಯದ ಬಳಕೆಯನ್ನು ನಿಯಂತ್ರಿಸುವುದರ ಮೂಲಕ ಅಬಕಾರಿ ಆದಾಯದಲ್ಲಿ ಉತ್ತಮತೆಯನ್ನು ಸಾಧಿಸುವ ದೂರದೃಷ್ಟಿಯನ್ನು ಇಲಾಖೆಯು ಹೊಂದಿರುತ್ತದೆ. ಕುಡಿತದಿಂದಾಗುವ ದುಷ್ಪರಿಣಾಮಗಳ ಕುರಿತು ಇಲಾಖೆಯಿಂದ ಕೈಗೊಳ್ಳಲಾಗುವ ಗ್ರಾಮ ಸಭೆ/ವಾರ್ಡ್ ಸಭೆಗಳಲ್ಲಿ ಸಾರ್ವಜನಿಕರಿಗೆ ತಿಳುವಳಿಕೆಯನ್ನು ನೀಡಲಾಗುತ್ತಿದೆ.<br><br>ಸರ್ಕಾರವು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯನ್ನು ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ರಚಿಸಿದ್ದು, ಮಂಡಳಿಯು ಹಲವು ಪ್ರಚಾರ ಮಾಧ್ಯಮಗಳ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸುತ್ತಿದೆ. ಮಂಡಳಿಯ ವತಿಯಿಂದ ರಾಜ್ಯದ ಶಾಲಾ ಕಾಲೇಜುಗಳಲ್ಲಿ ವಿಚಾರ ಸಂಕಿರಣ, ಬೀದಿ ನಾಟಕಗಳು, ರೇಡಿಯೋ ನಾಟಕ ಹಾಗೂ ಸಾಕ್ಷ್ಯಾ ಚಿತ್ರ ತಯಾರಿಸಿ ಅದನ್ನು ಸಮೂಹ ಮಾಧ್ಯಮದಲ್ಲಿ ಪ್ರಸಾರ ಮಾಡಲಾಗುತ್ತಿದೆ. ಮದ್ಯ ವರ್ಜನ ಶಿಬಿರಗಳ ಆಯೋಜಿಸಿ, ಪ್ರಮುಖ ವಸ್ತು ಪ್ರದರ್ಶನ ಹಾಗೂ ಇತರೆ ಜಾತ್ರೆಗಳಲ್ಲಿ ಮಳಿಗೆ ತೆರದು ಪ್ರಚಾರ ಮಾಡಲಾಗುತ್ತಿದೆ. ವಿಶ್ವ ಮಾದಕ ವಸ್ತು ವಿರೋಧಿ ಸಪ್ತಾಹ ಕಾರ್ಯಕ್ರಮಗಳು, ಪ್ರಚಾರ ಸಾಮಗ್ರಿಗಳನ್ನು ಮುದ್ರಿಸಿ ಮಂಡಳಿಯ ಕಾರ್ಯಕ್ರಮಗಳಲ್ಲಿ ಮತ್ತು ಸಂಘ ಸಂಸ್ಥೆಗಳು ಏರ್ಪಡಿಸುವ ಕಾರ್ಯಕ್ರಮಗಳಲ್ಲಿ ವಿತರಿಸಲಾಗುತ್ತಿದೆ. |

**ಆಇ 23 ಇಎಲ್‌ಕ್ಯೂ 2024**

(ಆರ್.ಬಿ.ತಿಮ್ಮಾಪುರ)
ಅಬಕಾರಿ ಸಚಿವರು